

## ಗುಣ್‌ಗುಣ್ ಫೌಂಡೇಷನ್

‘ಅಂಗವಿಕಲರಿಗೆ ಸಹಾಯ ಮಾಡಲ್ಲ, ಅವಕಾಶ ಕಲ್ಪಿಸುತ್ತೇನೆ’ ಎನ್ನುವ ಶುಭಜಿತ್ ಭಟ್ಟಾಚಾರ್ಯ ಗೌರಿಬಿದನೂರು ಬಳಿ ‘ಗುಣ್‌ಗುಣ್ ಫೌಂಡೇಷನ್’ ಹೆಸರಿನಲ್ಲಿ ಸ್ವಂತ ಸಂಸ್ಥೆ ಕಟ್ಟುತ್ತಿದ್ದಾರೆ. ಇದರ ಕಟ್ಟಡ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿವೆ. ‘ಗ್ರಾಮೀಣ ಭಾಗದ ಬಡ ಜನರಿಗೆ ಸರಿಯಾದ ಆರೋಗ್ಯ ಚಿಕಿತ್ಸೆ ಸಿಗುತ್ತಿಲ್ಲ. ಈ ಕಾರಣಕ್ಕೆ ಗೌರಿಬಿದನೂರಿನ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಶಿಬಿರಗಳನ್ನು ಆಯೋಜಿಸುತ್ತಿದ್ದೇವೆ’ ಎನ್ನುವ ಶುಭಜಿತ್ ಬಡ ಜನರಿಗೆ ಅಗತ್ಯವಿರುವ ಔಷಧಿಗಳನ್ನೂ ಉಚಿತವಾಗಿ ಒದಗಿಸುತ್ತಿದ್ದಾರೆ.

ಗೌರಿಬಿದನೂರಿನತ್ತ ಹಲವಾರು ಕೈಗಾರಿಕೆಗಳು ಮುಖಮಾಡಿವೆ. ದೇಶದ ನಾನಾ ಭಾಗಗಳಿಂದ ಜನರು ಉದ್ಯೋಗ ಅರಸಿ ಅತ್ತ ಬರುತ್ತಿದ್ದಾರೆ. ಹೀಗೆ ಬಂದವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಅವರನ್ನು ಶಿಕ್ಷಿತರನ್ನಾಗಿಸುವುದು ಫೌಂಡೇಷನ್ ಉದ್ದೇಶ. ಅಂಗವಿಕಲ ಮಕ್ಕಳಿಗಾಗಿ ವಿಶೇಷ ಶಿಕ್ಷಣ ಹಾಗೂ ಥೆರಪಿ ಕಾರ್ಯಕ್ರಮಗಳನ್ನು ಆಯೋಜಿಸುವ ಉದ್ದೇಶವಿದೆ ಎನ್ನುವ ಅವರು, ‘ಅಂಗವಿಕಲರನ್ನು ಮುಖ್ಯವೇದಿಕೆಗೆ ಕರೆತರಲು ಇರುವ ಎಲ್ಲ ಆದ್ಯತಾ ಕ್ರಮಗಳನ್ನು ಫೌಂಡೇಷನ್ ವತಿಯಿಂದ ಮಾಡಲಾಗುತ್ತದೆ. ಅಂಗವಿಕಲ ಮಕ್ಕಳ ತಾಯಂದಿರಿಗೆ ಉದ್ಯೋಗ ಆಧರಿತ ತರಬೇತಿ ನೀಡುತ್ತೇವೆ’ ಎಂದು ಹೇಳುತ್ತಾರೆ.

ದಿನ ತೆಂಗಿನಮರದಲ್ಲಿ ಕಾಯಿ ಕೀಳಲು ಮನೆಯ ಮೇಲೆ ಹೋಗಿ ಅಲ್ಲೇ ಇದ್ದ ಕಬ್ಬಿಣದ ಉದ್ದನೆಯ ಸರಳಿನಿಂದ ತೆಂಗಿನಕಾಯಿ ಕೀಳಲು ಮುಂದಾದರು. ಅಚಾನಕ್ಕಾಗಿ ಪಕ್ಕದಲ್ಲಿದ್ದ ಹೈಟೆನ್ಷನ್ ವಿದ್ಯುತ್ ತಂತಿಗೆ ಕಬ್ಬಿಣದ ಸರಳು ತಾಗಿ ಕುಸಿದುಬಿದ್ದರು. ಇವರ ಒದ್ದಾಟ, ಕಿರುಚಾಟ ನೋಡಿ, ಸಾಕುನಾಯಿ ಅವರ ಮೇಲೆ ಜಿಗಿಯಿತು. ಅವರು ನೆಲಕ್ಕುರುಳಿದರೆ, ನಾಯಿ ವಿದ್ಯುತ್ ಸ್ಪರ್ಶದಿಂದ ಅಲ್ಲೇ ಸಾವನ್ನಪ್ಪಿತ್ತು.

ಅಸ್ವಸ್ಥನಾಗಿದ್ದ ಶುಭಜಿತ್ ಅವರನ್ನು ಅವರ ಪೋಷಕರು ಬ್ಯಾಪ್ಟಿಸ್ಟ್ ಆಸ್ಪತ್ರೆಗೆ ದಾಖಲಿಸಿದರು. ಇವರು ಕೋಮಾಗೆ ಜಾರಿದರು. ಸುಮಾರು ಹತ್ತು ತಿಂಗಳವರೆಗೆ ಚಿಕಿತ್ಸೆ ಪಡೆದು 13 ಬಾರಿ ಶಸ್ತ್ರಚಿಕಿತ್ಸೆಗೆ ಒಳಗಾದ ನಂತರ ಅನಿವಾರ್ಯವಾಗಿ ಕೈಗಳನ್ನು ಸ್ವಲ್ಪ ಸ್ವಲ್ಪವೇ ತೆಗೆಯಬೇಕಾಯಿತು. ಕೈಗಳಿಲ್ಲದಿದ್ದರೂ ಬದುಕಿದರು. ಈ ಘಟನೆಯನ್ನು ನೆನಪಿಸಿಕೊಳ್ಳುತ್ತಾ, ‘ನಾನಿಂದು ಬದುಕಿರಲು ಆ ನಾಯಿಯೇ ಕಾರಣ’ ಎಂದು ಭಾವುಕರಾಗುತ್ತಾರೆ ಅವರು.

### ಕೈಗಳಿಲ್ಲದೆ, ಡಿಎಲ್ ಪಡೆದ ಸಾಧನೆ

ಕೈಗಳಿಲ್ಲದ ವ್ಯಕ್ತಿಗೆ ಚಾಲನಾ ಪರವಾನಗಿ (ಡಿಎಲ್) ಕೊಡಲು ಅವಕಾಶವಿಲ್ಲ. ಈ ನಿಯಮ ತನಗಲ್ಲ ಎಂಬುದನ್ನು ಸಾಬೀತುಪಡಿಸಿ ಹೇಗೆ ಡಿಎಲ್ ಪಡೆದರು ಗೊತ್ತೇ? ಅವರ ಮಾತಲ್ಲೇ ಓದಿ...

“ಡಿಎಲ್ ಕೊಡುವುದು ವಾಹನ ಚಾಲನೆಯ ಸಾಮರ್ಥ್ಯದ ಮೇಲೆ. ನಾನೂ ಬೈಕ್ ಓಡಿಸುತ್ತೇನೆ, ಕಾರು ಚಲಾಯಿಸುತ್ತೇನೆ. ನಾನ್ಯಾಕೆ ಡಿಎಲ್ ಪಡೆಯಬಾರದು ಎಂದೆನಿಸಿ, ಯಲಹಂಕ ಆರ್‌ಟಿಒ ಅಧಿಕಾರಿಗಳು ಹಾಗೂ ಶಾಂತಿನಗರದ ಆರ್‌ಟಿಒ ಕಮಿಷನರ್‌ಗೆ ಮನವಿ ಸಲ್ಲಿಸಿದೆ. ಕೈಗಳಿಲ್ಲದ ನಿಮಗೆ ಡಿಎಲ್ ಕೊಡಲು ಸಾಧ್ಯವಿಲ್ಲ ಎಂಬ ಪ್ರತ್ಯುತ್ತರ ಸಿಕ್ಕಿತು. ನಿಮ್ಮಂಥವರಿಗೆ ಡಿಎಲ್ ಕೊಟ್ಟ ಉದಾಹರಣೆಗಳು ಇವೆಯೇ ಎಂಬುದರ ಬಗ್ಗೆ ಅಧಿಕಾರಿಗಳು ನನ್ನನ್ನೇ ಪ್ರಶ್ನಿಸಿದರು.

ಮಧ್ಯಪ್ರದೇಶ ಹಾಗೂ ಹಿಮಾಚಲ ಪ್ರದೇಶದ ಆರ್‌ಟಿಒ ಅಧಿಕಾರಿಗಳು ಆಟೊಮ್ಯಾಟಿಕ್ ವಾಹನಗಳ ಚಾಲನೆಗಾಗಿ ಎರಡೂ ಕೈಗಳಿಲ್ಲದ ವ್ಯಕ್ತಿಗಳಿಬ್ಬರಿಗೆ ಡಿಎಲ್ ಕೊಟ್ಟ ಮಾಹಿತಿಯು ಸಿಕ್ಕಿತು. ಹೇಗೋ ಅವರನ್ನು ಸಂಪರ್ಕಿಸಿ ಅವರ ಡಿಎಲ್‌ಗಳ ಪ್ರತಿಗಳನ್ನು ಪಡೆದುಕೊಂಡೆ. ಜೊತೆಗೆ ಅಂಗವಿಕಲರು ಆಟೊಮ್ಯಾಟಿಕ್ ವಾಹನ ಚಾಲನೆ ಮಾಡಬಹುದು ಮತ್ತು ಅದಕ್ಕಾಗಿ ಅವರಿಗೆ ಡಿಎಲ್ ಕೊಡಬಹುದೆಂದು ಗೃಹ ಇಲಾಖೆಯ ಆದೇಶದ ಪ್ರತಿಯೂ ಸಿಕ್ಕಿತು. ತಡಮಾಡದೇ ಆ ಎಲ್ಲ ಮಾಹಿತಿಯೊಂದಿಗೆ ಮತ್ತೆ ಯಲಹಂಕ ಆರ್‌ಟಿಒ ಅಧಿಕಾರಿಗಳನ್ನು ಭೇಟಿಯಾದೆ.

ಅಂಗವಿಕಲ ವ್ಯಕ್ತಿಗೆ ಡಿಎಲ್ ಕೊಟ್ಟ ಉದಾಹರಣೆ ಕರ್ನಾಟಕದಲ್ಲಿ ಇದೆಯೇ ಎಂಬ ಪ್ರಶ್ನೆ ಅಧಿಕಾರಿಗಳಿಂದ ಎದುರಾಯಿತು. ಅದಕ್ಕೂ ಸಿದ್ಧವಿದ್ದ ನಾನು ಪದ್ಮಶ್ರೀ ಪುರಸ್ಕೃತ ರಾಜಣ್ಣ ಎಂಬುವವರ ಮಾಹಿತಿ ಕೊಟ್ಟೆ. ಬಳಿಕ ಮೆಡಿಕಲ್ ಪ್ರಮಾಣಪತ್ರದತ್ತ ಕೈತೋರಿದರು. ಅದಕ್ಕಾಗಿ ಕೆ.ಆರ್. ಪುರಂ ಸರ್ಕಾರಿ ಆಸ್ಪತ್ರೆಯ ವೈದ್ಯರನ್ನು ಸಂಪರ್ಕಿಸಿದಾಗ, ‘ನಿಮ್ಮಂಥವರು ಕಾರು ಚಾಲನೆ ಮಾಡಲು ಸಾಧ್ಯವೇ ಇಲ್ಲ. ನಾವು ಪ್ರಮಾಣ ಪತ್ರ ಕೊಡುವುದಿಲ್ಲ’ ಎಂದು ಡೀಮೋಟಿವೇಟ್ ಮಾಡಿದರು.

ಆ ಬಳಿಕ ಆರ್ಥೋಪೆಡಿಕ್ ಡಾಕ್ಟರ್ ಶರತ್ ಅವರನ್ನು ಭೇಟಿಯಾದೆ. ಪರಿಶೀಲನೆಗಾಗಿ ಅವರು ನನ್ನಿಂದ ದಾಖಲೆಗಳನ್ನು ಪಡೆದು ಒಂದು ವಾರ ಸಮಯ ಕೇಳಿದರು. ವಾರದ ಬಳಿಕ ಅವರೇ ಕರೆ ಮಾಡಿ ಶುಭ್, ನಿಮ್ಮ ಪ್ರಮಾಣಪತ್ರ ತೆಗೆದುಕೊಂಡು ಹೋಗಿ ಎಂದರು. ನನ್ನ ಖುಷಿಗೆ ಪಾರವೇ ಇರಲಿಲ್ಲ. ಮೆಡಿಕಲ್ ಸರ್ಟಿಫಿಕೇಟ್ ಪಡೆದು ಸೀದಾ ಯಲಹಂಕ ಆರ್‌ಟಿಒ ಅಧಿಕಾರಿಗಳ ಬಳಿಗೆ ಹೋದೆ.

ಅವರದ್ದು, ‘ಡಿಎಲ್ ಕೊಡಲು ಸಾಧ್ಯವಿಲ್ಲ’ ಎಂಬ ಅದೇ ರಾಗ ಅದೇ ತಾಳ ಕೇಳಿ ಆಕ್ರೋಶಗೊಂಡೆ. ‘ಸರ್ ಎಲ್ಲ ವ್ಯಕ್ತಿಗಳಿಗೂ ಮೊದಲು ನೀವು ಎಲ್‌ಎಲ್ (ಕಲಿಕಾ ಪರವಾನಗಿ) ಕೊಡುತ್ತೀರಿ. ಅದೇ ರೀತಿ ನನಗೂ ಕೊಡಿ. ಪರೀಕ್ಷೆ ವೇಳೆ ನಾನು ವಾಹನವನ್ನು ಸರಿಯಾಗಿ ಚಾಲನೆ ಮಾಡದಿದ್ದರೆ ನನ್ನ ಅಪ್ಲಿಕೇಷನ್ ರಿಜೆಕ್ಟ್ ಮಾಡಿ’ ಎಂದೆ. ಅದಕ್ಕೆ ಮಣಿದ ಆರ್‌ಟಿಒ ಅಧಿಕಾರಿ ಮೊದಲು ಎಲ್‌ಎಲ್ ನೀಡಿದರು. ಚಾಲನಾ ಪರೀಕ್ಷೆ ವೇಳೆ ನನ್ನ ವಾಹನ ಚಾಲನೆಯ ಚಾಕಚಕ್ಯತೆಗೆ ಬೆರಗಾದ ಅಧಿಕಾರಿ, ಡಿಎಲ್‌ಗೂ ಸಹಿ ಹಾಕಿ ಶುಭಕೋರಿದರು. 45 ದಿನಗಳ ಬಳಿಕ ಕೊನೆಗೂ ಡಿಎಲ್ ಕೈಸೇರಿತು”.

ಹೀಗೆ ತಮ್ಮ ಕಥೆಯನ್ನು ವಿವರಿಸುವ ಶುಭಜಿತ್ ಅವರ ಮಾತುಗಳಲ್ಲಿ ಆತ್ಮವಿಶ್ವಾಸ ಎದ್ದುಕಾಣುತ್ತದೆ. ಆ ಆತ್ಮವಿಶ್ವಾಸವೇ ಅವರ ಬದುಕಿಗೆ ಇಂಧನವೂ ಆಗಿದೆ.